"ಹೌದು ಬುದ್ಧಿ. ದೊಡ್ಡ ಬುದ್ಧಿಯವ್ರು ಹೋದಮೇಲೆ, ಎಲ್ಲಾ ಹಾಳಾಗೋಯ್ತು. ಚಿಕ್ಕ ಬುದ್ಧಿಗಳಿಗೆ ದೊಡ್ಡಿ ಇಟ್ಕೊಂಡು ಹಾಲು ಮಾರೋದೆಲ್ಲಾ ಇಷ್ಟ ಇಲ್ಲ. ಇದು ಏನು ನಾಥ ಹಿಡಿದ ಕೆಲಸ ಅಂತ ಒಂದೇ ಕಿರಿಕಿರಿ. ಎಲ್ಲಾ ಮಾರಿಹಾಕಿ ಎರಡು ಮೂರು ಬಸ್ ಕೊಂಡುಕೊಂಡು ಬೇರೆ ಯಾಪಾರಕ್ಕೆ ಹೋದ್ರು. ತೊಟ್ಟಿ ಮಾಡೋನಿಗೆ ಏನು ಕೆಲಸ ಇಲ್ಲಿ ಅಂತ ನನ್ನನ್ನ ಕಳಿಸಿಬಿಟ್ರು..."

"ಆಮೇಲೆ?"

"ಏಂಬಲಮ್ ಪಕ್ಕದಲ್ಲಿ ಏಕಾಂಬರಂ ಅಂತ ಒಬ್ರು ಬಿಳಿ ಹಂದಿಗಳನ್ನು ಮಾತ್ರ ಸಾಕೊಂಡು ಒಂದು ದೊಡ್ಡಿ ಇಟ್ಟಿದ್ರು. ಅಲ್ಲಿ ಹೋಗಿ ತೊಟ್ಟಿ ಮಾಡಿಕೊಟ್ಟೆ. ನನ್ನ ಕೆಲಸ ನೋಡಿ ಇಲ್ಲೇ ಇದ್ದುಬಿಡೋ ಅಂದ್ರು. ಬೀದಿ ಬೀದಿ ಅಲೆಯೋ ಕೆಲ್ಸಾ ತಪ್ಪೂಂತ ನಾನೂ ಅಲ್ಲೇ ಇದ್ದೆ..."

"ಆ ಜಾಗದಲ್ಲಿ ಏನಾದ್ರೂ ಸಮಸ್ಯೇ ಆಯ್ತಾ?" ಅಪ್ಪನ ಪ್ರಶ್ನೆಯನ್ನು ಕೇಳಿ ಅದನ್ನು ನಿರಾಕರಿಸುವಂತೆ ಅವರು ತಕ್ಷಣ ತಲೆಯಾಡಿಸಿದರು.

"ನಾವು ಒಂದು ಬಯಸೋವಾಗ ದೇವ್ರೊಂದು ಬಯಸಿದ್ರೆ, ಏನು ಸ್ವಾಮಿ ಮಾಡೋಕ್ಕಾಗುತ್ತೆ? ಎಲ್ಲಾ ಅವನು ಆಡೋ ನಾಟಕ ಸ್ವಾಮಿ" ಅವರು ನಿಟ್ಟುಸಿರು ಬಿಟ್ಟರು.

"ಏನಾಯ್ತು, ಚುಟುಕಾಗಿ ಹೇಳು."

"ಅವರಿಗೆ ಒಬ್ಬಳೇ ಮಗಳು ಸ್ವಾಮಿ. ತಾಯಿ ಇಲ್ಲ. ಪುಣ್ಯಾತ್ಗಿತ್ತಿ. ಯಾವಾಗ ಅನ್ನ ಹಾಕಿದ್ರು ನಾಲ್ಕು ತುಂಡು ಮೀನ್ ಇಲ್ದೇ ಇರೋದಿಲ್ಲ. ಬೇಡಾ ಬೇಡಾಂದ್ರೂ ತುಂಬಿ ತುಂಬಿ ಹಾಕೋಳು. ಅವಳಿಗೆ ಮದುವೆ ಮಾಡಿ ಫ್ರಾನ್ಸಿಗೆ ಕಳಿಸಿಕೊಟ್ಟಿದ್ರು ಗೌಡ್ರು. ಆ ಸಂಸಾರದಲ್ಲಿ ಏನೋ ಸಮಸ್ಯೆ. ತಕ್ಷಣ ಅಲ್ಲಿಗೆ ಹೋಗೋ ಒಂದು ಟಿಕ್ಕಟ್ಟಿಗೆ ಸಿಕ್ಕಾಕೊಂಡ್ರು. ಹಂದಿನೆಲ್ಲಾ ಬಂದ ಬೆಲೆಗೆ ಮಾಂಸದಂಗಡಿಯವರಿಗೆ ಮಾರಿಹಾಕಿ ಒಂದೇ ವಾರದಲ್ಲಿ ಫ್ರಾನ್ಸಿಗೆ ಹೊರಟೋದ್ರು..."

"ಮತ್ತೆ ನಿನ್ನ ಬದುಕಿಗೆ ದಾರಿ?"

"ಸಾಮಾನುಗಳನ್ನು ತೆಗೆದು ಒಂದು ಮೂಟೆ ಕಟ್ಕೊಂಡು ಬೀದಿ ಬೀದಿ ಅಲಿಯೋದೆ ಗತೀಂತ ಹೊರಟ್ಬಿಟ್ಟೆ. ಊರಲ್ಲಿ ಅಮ್ಮಾನೂ ತಂಗೀನೂ ಇದ್ದಾರೆ. ತಂಗೀಗೆ ಸ್ವಲ್ಪ ಬುದ್ಧಿಮಂದ, ಹೇಗೋ ಅವರ ಹೊಟ್ಟೆಪಾಡು ಅವರು ನೋಡ್ಕೋತ್ತಾರೆ. ಅವರ ಭಾರವನ್ನು ನಾನು ಈವರೆಗೆ ಹೊತ್ತಿಲ್ಲ. ನನ್ನ ಭಾರವೂ ಅವರಿಗೆ ಬೇಡಾಂತಾ ಗೋಣಿಚೀಲದೊಂದಿಗೆ ಹೊರಟ್ಬಿಟ್ಟೆ... ಹೀಗೇ ನನ್ನ ಬಂಡಿ ಓಡ್ತಾ ಇದೆ ಸ್ವಾಮಿ..."

ಅಪ್ಪ ಅವರನ್ನು ಮೇಲೆ ಕೆಳಗೆ ನೋಡಿದರು. ನಂತರ ನನ್ನ ಬಳಿ "ಅಮ್ಮ ಎಲ್ಲಿದ್ದಾಳೇಂತ ನೋಡ್ಕೊಂಡು ಬಾ ಹೋಗು" ಎಂದರು. ತಕ್ಷಣ ನಾನು ಕೊಟ್ಟಿಗೆಗೆ ಓಡಿದೆ. ಅಲ್ಲಿ ಅಮ್ಮ ಇರಲಿಲ್ಲ. ಅತ್ತೆಯರು ಕೊಟ್ಟಿಗೆಯನ್ನು ತೊಳೆಯುತ್ತಿದ್ದರು. "ಅತ್ತೆ ಅಮ್ಮನ್ನ ನೋಡಿದ್ರಾ?" ಎಂದು ಕೇಳಿದೆ.

"ಹಾ ನೋಡ್ದೋ, ಸೆರಗಲ್ಲಿ ಗಂಟ್ಹಾಕಿಟ್ಟಿದ್ದೀನಿ. ಬಿಚ್ಚಿ ಬಿಡಲಾ?" ಎಂದು ದೊಡ್ಡ ಅತ್ತೆ ನಕ್ಕಳು.

"ಇಲ್ಲಿ ಬಾರೋ, ಸುಣ್ಣದ ಡಬ್ಬಿಯಲ್ಲಿ ಮುಚ್ಚಿಟ್ಟಿದ್ದೀನಿ" ಎಂದಳು ಚಿಕ್ಕ ಅತ್ತೆ. ಅವರಿಗೆ ತುಟಿಯನ್ನು ಕೊಂಕಿಸಿ ತೋರಿಸುತ್ತ ಹೊರಗೆ ಬಂದೆ. ಅಮ್ಮ ಸ್ನಾನದ ಕೋಣೆಯಿಂದ ದೇವರ ಕೋಣೆಯ ಕಡೆಗೆ ಹೋಗುವುದನ್ನು ನೋಡಿದೆ. ತಕ್ಷಣ ಹಿಂತಿರುಗಿ ಬಂದು ಅಪ್ಪನ ಬಳಿ ಹೇಳಿದೆ. ಅಮ್ಮ ಹಿಂದಿನಿಂದಲೇ ಬಂದು ಇಣಕಿ ನೋಡಿದಳು. ತಕ್ಷಣ ಅಮ್ಮನನ್ನು ಅಪ್ಪ ಕರೆದರು. "ಒಳ್ಳೆ ಸಮಯಕ್ಕೆ ಬಂದೆ ಇಲ್ಲೇ ಕೂತು ಅಂಡೆಯನ್ನು ನೋಡ್ತಿರು. ಇದೋ ಬಂದೆ" ಎಂದು ಕೂರಿಸಿಬಿಟ್ಟು, ನನ್ನ ಬಳಿ "ಅವನನ್ನು ಬೇಲಿ ಕಡೆಯಿಂದ ತೋಟಕ್ಕೆ ಕರ್ಕೊಂಡು ಬಾ" ಎಂದು ಹೇಳುತ್ತಲೇ ಮನೆಯೊಳಗೆ ಹೋದರು.

ಅವರನ್ನು ಮೊಟ್ಟಮೊದಲು ತಲೆಯೆತ್ತಿ ನೋಡಿ ನಾನು ನಕ್ಕೆ. ಅವರು ಬಗ್ಗಿ ಗೋಣಿಚೀಲದ